Reg No B G 155 20-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಖರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕಿಸ್ತಾನದಲ್ಲಿ ರಾಜಕೀಯ ಆಂದೋಳನ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಉಪವಾಸ ನಿಂತಿತು

ಬೆಂಗಳೂರು— ವಿಧಾನಸೌಧದ ಮುಂದೆ ಉಪವಾಸ ಮುಷ್ಕರ ಹೂಡಿದ್ದ ಪಾಂಡವಪುರದ ಶ್ರೀ ವೈರಮುಡಿಗೌಡ ಮತ್ತು ಶ್ರೀ ಹೊನ್ನಗಿರಿ ಗೌಡರು, ಸಚಿವಾಲಯದ ಮಂತ್ರಿ ಶ್ರೀ ಬಿ ಎಂ ಪಾಟೀಲರು ಕೊಟ್ಟ ಭರವಸೆ ಮೇಲೆ ಉಪವಾಸ ನಿಲ್ಲಿಸಿದರು.

ಜೂಜಿನ ಕುದುರೆಗಳು

ಮದರಾಸು— ಜೂಜಿನ ಕುದುರೆ 'ಬ್ಲೆಸಿಂಗ್' ರೇಸ್‌ಕೋರ್ಸಿನಲ್ಲಿ ತನ್ನ ಕಾರ್ಯದಲ್ಲಿದ್ದಾಗ 800 ಮೀಟರು ಗುರ್ತಿನ ಹತ್ತಿರ ಎಡವಿ ಸತ್ತು ಬಿದ್ದಿತು – ಅದರ ಜೊತೆಯಲ್ಲಿದ್ದ 'ದಿವ್ಯಜ್ಞಾನ' ಕುದುರೆಯು ಅದಕ್ಕೆ ಡಿಕ್ಕಿ ಹೊಡೆದು ಬಿದ್ದು ತೀವ್ರ ಗಾಯಗೊಂಡು ನಾಶನಮಾಡಲ್ಪಟ್ಟಿತು – ಅದರ ಜೊತೆಯಲ್ಲಿದ್ದ ಮತ್ತೊಂದು ಕುದುರೆಯನ್ನು ಜಾಕ್ಕಿ ಎಳೆದು ರಕ್ಷಿಸಿದನು – ಇವು ಮೂರೂ ಅಹಮದ್ ಅಬ್ಬಾಸ್ ರ ತಬೇಲಿಗೆ ಸೇರಿದ ಕುದುರೆಗಳು.

●

ಸತ್ಯವಾಕ್

ಭದ್ರಾವತಿ— ಇಂದು ನಮಗೆ ಅವಶ್ಯಕವಾಗಿರುವುದು ಕಬ್ಬಿಣ, ಉಕ್ಕು ಉತ್ಪಾದನೆಯಲ್ಲ, ನಮ್ಮ ಆರ್ಥಿಕತೆ ಆಶ್ರಯಿಸಿರುವ ಆಹಾರಧಾನ್ಯಗಳು ಎಂದು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

●

ಉದ್ಘಾಟನೆ

ಸಾಗರ— ರೂ. 12 5 ಲಕ್ಷದ 85 ಅಡಿ ಉದ್ದದ ಅನವಟ್ಟಿ ಹತ್ತಿರ ವರದಾ ನದಿ ಮೇಲಿನ ಗೊಂಡಿ ಸೇತುವೆಯನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟಿಸಿದರು.

ಲಂಚದ ಆರೋಪ

ತಿರುವೆಂದ್ರ— ಆರ್ಥ ಮಂತ್ರಿ ಕುಂಜುರವರು ಮುಂತ್ರಿಯಾಗುವದಕ್ಕೆ ಮುಂಚೆ ತಮಗಿದ್ದ ರೂ. 3 ಲಕ್ಷವನ್ನು ಲಂಚದ ಪ್ರಭಾವದಿಂದ ತೀರಿಸಿಕೊಂಡಿರುವರೆಂಬ ವಿಷಯ ಶಾಸನಸಭೆಯಲ್ಲಿ ಬಂದಾಗ ಆಪಾದನೆ ನಿರಸ್ಪಟ್ಟರಿ ಅವರ ಮೇಲೆ ಕಾಯಕ್ರಮ ತೆಗೆದುಕೊಳ್ಳಲಾಗುವದೆಂದು ಮುಖ್ಯ ಮಂತ್ರಿ ನಂಬೂದರಿಪಾದರು ತಿಳಿಸಿದರು.

○

ಭೀತಿಯಿಲ್ಲ

ನವದೆಹಲಿ— ಕೇರಳದಲ್ಲಿ ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಯ ಸ್ಥಾಪನೆಯಿಂದ ರಕ್ಷಣಾ ರೀತಿಯಲ್ಲಿ ಮಾಪ್ಲಾ ಬೆದರಿಕೆ ಏನಿಲ್ಲವೆಂದು ರಕ್ಷಣಾ ಮಂತ್ರಿಗಳವರು ಹೇಳಿದರು

●

ಹೆಚ್ಚಿಲ್ಲ

ನವದೆಹಲಿ— ರೈಲ್ವೇ ಬಜೆಟ್ಟಿನಲ್ಲಿ ಪ್ರಯಾಣೀಕರ ದರವಾಗಲಿ, ಸಾಮಾನು ಸಾಗಾಣಿಕೆ ದರವಾಗಲೀ ಹೆಚ್ಚಿಲ್ಲ.

★

ಗೋಲ್ಫ್ ಪಂಥ

ಫೋನಿಕ್ಸ್ ಆರಿಜೋ— ಗೋಲ್ಫ್ ಪಂಥದಲ್ಲಿ ಜೆನಿ ಲಿಟ್ಲರ್ ವಿಜಯಗೊಂಡು 1 ಲಕ್ಷ ಡಾಲರು ಪಡೆದರು.

ಪಾಕಿಸ್ತಾನದಲ್ಲಿ

ನವದೆಹಲಿ— ನಿಷ್ಪಕ್ಷ ಅಯೂಬರೊಡನೆ ವಿರೋಧಗಳ ಮಾತುಕತೆಗೆ ಏರ್ಪಡಿಸಿದ್ದ ದುಂಡುಮೇಜು ಪರಿಷತ್ತು ನಡೆಯಲಿಲ್ಲ – ಅಲ್ಲಿ ರಾಜಕೀಯ ಆಂದೋಳ ಪ್ರಾರಂಭವಾದಾರಭ್ಯ ಇಲ್ಲೀವರೆಗೆ 48 ವಿದ್ಯಾರ್ಥಿಗಳೂ ಸೇರಿ 67 ಜನ ಜನ ಪೋಲೀಸರ ಗುಂಡಿನೇಟಿನಿಂದ ಸತ್ತರು – ಗುಂಪುಗಳಲ್ಲಿನ ಘರ್ಷಣೆಯಲ್ಲಿ ಲಾಠಿ ಛಾರ್ಜು ಮತ್ತು ಭರ್ಜಿ ತಿವಿತದಲ್ಲಿ 17 ಹುಡುಗಿಯರು ಸೇರಿ 321 ಮಂದಿ ಗಾಯಗೊಂಡರು – ಅಯೂಬ್ ವಿರುದ್ದದ ಪ್ರದರ್ಶನಕಾರರು 21 ಸರಕಾರಿ ಕಟ್ಟಡಕ್ಕೆ ಬೆಂಕಿಹತ್ತಿಸಿದರು – 3 ಫೈರ್ ಬ್ರಿಗೇಡ್ ಎಂಜಿ ಸೇರಿ 33 ಸರ್ಕಾರಿ ವಾಹನಗಳನ್ನು ಸುಟ್ಟರು – 4 ಪ್ರಾಂತೀಯ ಮಂತ್ರಿಗಳ ಮನೆ ಸುಡಲ್ಪಟ್ಟಿತು – 5 ಸರ್ಕಾರಿ ಕಚೇರಿಗಳು ಸುಡಲ್ಪಟ್ಟವು.

ಪೌರಸಭೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ || 27 ಬುಧವಾರ ಮಧ್ಯಾನ್ಹಾ ಪರ ನಡೆಯುವುದು.

ಮುನಿಸಿಪಲ್ ಕೌನ್ಸಿಲರ್ ಶ್ರೀ ಬಿ.ಎಕೆಂಗೇಗೌಡರು, ಸೈಕಲ್ ಟ್ಯಾಕ್ ರದ್ದಾಗಬೇಕೆಂಬ ನಿರ್ಣಯವನ್ನೂ, ಮುನಿಸಿಪಲ್ ಕೌನ್ಸಿಲರ್ ಶ್ರೀಕಂಠಶರ್ಮರು, ಆ ಕ್ಟ್ರಾಯ್ ವಜಾ ಆಗಬೇಕೆಂಬ ನಿರ್ಣಯವನ್ನೂ ಸಭೆಗೆ ಕಳುಹಿಸಿರುವರು.

★

ಸಮುದ್ರದಲ್ಲಿ ಚಿನ್ನ

ಲಂಡನ್— ಅಮೇರಿಕಾದ ಸಮುದ್ರ ಶೋಧಕರು ಫೆಸಿಫಿಕ್ ಸಾಗರದಲ್ಲಿ 100 ಮಿಲಿಯ ಡಾಲರುಗಳಷ್ಟರ ಭಂಗಾರದ ಗಣಿ ಪತ್ತೆಮಾಡಿರುವರು.

★

All India Blind Welfare Week

(Shivo-Chaturdasi Week)

16 th February — 22 nd February 9

FLAG AY on 21 st February 1969

— HEL THE HELPLESS BLIND —

Sponsored by :

Netaji E e & General Hospital

P. O Ramachandrapur Ashram, Dist. Purulia (W. B)

ದಿವ್ಯವಾಣಿ

ಶತ್ರುವಿನ ಭಾಷೆಯ ನಯವಿನಯಗಳಿಗೆ ಮರುಳಾಗಬಾರದು ; ಶತ್ರುವು ನಿಮಗೆ ಒಳ್ಳೆಯದಲ್ಲದ ರೀತಿಯಲ್ಲಿ ಬಿಲ್ಲನ್ನು ಬಗ್ಗಿಸುವಂತೆ, **ಮಾತು**ಗಳನ್ನು ಬಗ್ಗಿಸುತ್ತಾನೆ.

— ತಿರುವಳ್ಳುವರ್

ರಶಿಯ್ ಭಾಷೆಗೆ " ಮಹಾಭಾರತ " ದ ಕೊನೆ ಸಂಪುಟದ ತರ್ಜುಮೆ

ಆಷ್ಟಾಬಾದ್— ಭಾರತದ ಮಹಾಕಾವ್ಯವಾದ " ಮಹಾಭಾರತ " ಎಂಟನೆಯ, ಕೊನೆಯ ಸಂಪುಟದ ರಶಿಯ್ ಭಾಷಾಂತರವು ತುರ್ಕ್‌ಮೇನಿಯಾದಲ್ಲಿ (ಮಧ್ಯ ಏಶಿಯ) ಬಿಡುಗಡೆ ಮಾಡಲ್ಪಟ್ಟಿದೆ. ಅಕಾಡೆಮಿಷಿಯನ್ ಬರೀಸ್ ಸ್ಮಿರ್ನೋವ್ ರವರು ಭಾಷಾಂತರಿಸಿದ " ಮಹಾಭಾರತ " ದ ಮೊದಲು ಸಂಪುಟವು 14 ವರ್ಷಗಳ ಹಿಂದೆ ಪ್ರಕಟಗೊಂಡಿತು ; ನಂತರ " ಭಗವದ್ಗೀತೆ " ಹಾಗೂ ಬೇರೆ ಕಾವ್ಯಗಳು ತರ್ಜುಮೆಗೊಂಡವು. ಸೋವಿಯಟ್ ಒಕ್ಕೂಟ ಮತ್ತು ಭಾರತದ ಜನತೆಗಳ ಮೈತ್ರಿಗೆ ಸ್ಮಿರ್ನೋವರು ಈ ಕೃತಿಯನ್ನು ಅರ್ಪಿಸಿದ್ದಾರೆ.

ಪುಡ್‌ಲ್ಯಾಂಡ್ಸ್ ಜಯಪ್ರದ 2ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ ★ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಜ್ಞಿ ಸ್ಮಿರಾಬಾನು ಅಭಿನಯಿಸಿರುವ ಸಕಲರೂ ನೋಡಿ ಆನಂದಿಸಬೇಕಾದ ಆತ್ಯಮೋಘ ಚಿತ್ರ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಅಪೆದಾ— ಜನವರಿಯು 4 ನೇ ವಾರ

— ಆತ್ಯಮೋಘ ತಮಿಳು ಚಿತ್ರ —

ಒಳವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Protectthe Cow

Help The Goraksha na

Edited, Printed and published by Dharmaprachara Niratha M S Krishna Rao (Proprietor) at the Satyavad Press Chamarajapuram, Mysore 4

ನಿಮಗೆ ಸ್ವಂತ ಮನೆ

ಈ ಕನಸು ನನಸಾಗಲು ಎಲ್.ಐ.ಸಿ.ಯು ಈಗ ಸಹಾಯಮಾಡುತ್ತದೆ...ವಾಸಿಸಲು ಮನೆ ಕಟ್ಟುವುದಕ್ಕಾಗಿ ಅಥವಾ ಹೊಸ ಮನೆಯನ್ನು ಖರೀದಿಮಾಡಲು ನಿಮಗೆ ನ್ಯಾಯವಾದ ಬಡ್ಡಿಯ ದರದಲ್ಲಿ ದೊಡ್ಡ ಸಾಲವನ್ನು ಕೊಡುತ್ತದೆ.



ಸಾಲದ ಸಂದಾಯಕ್ಕಾಗಿ ನಿರ್ಧರಿಸಿದ ಪೂರ್ತಿ ಕಾಲಾವಧಿಯಲ್ಲಿ ಒಂದು ವೇಳೆ ನೀವು ಇರದಿದ್ದರೂ ನಿಮ್ಮ ಮುಡಿದ ಮುಕ್ಕಳಿಗೆ ಅವರದ್ದೇ ಆದ ಮನೆಯಲ್ಲಿ ಸುಖವಾಗಿ, ನೆಮ್ಮದಿಯಿಂದ ವಾಸಿಸುವಂತಾಗುವುದು. ಇದೊಂದು ನಿಜವಾಗಿಯೂ ಮನಸ್ಸಿಗೆ ಸಂತೃಪ್ತಿಯನ್ನುಂಟುಮಾಡುವ ವಿಷಯವಲ್ಲವೇ?

ಈ ಯೋಜನೆಯು ಕೆಲವು ಆರಿಸಿರುವ ಪಟ್ಟಣ ಪ್ರದೇಶಗಳಿಗೆ ಮಾತ್ರ ಅನ್ವಯಿಸುತ್ತದೆ. ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ಎಲ್.ಐ.ಸಿ. ಡಿವಿಜನಲ್ ಆಫೀಸಿನಲ್ಲಿ ವಿಚಾರಿಸಿರಿ.

ಸೆರತ್ತುಗಳು ಬಹಳ ಸುಲಭ. ಮುಖ್ಯವಾಗಿ, ಮನೆ ಕಟ್ಟಲು ನಿಮ್ಮದೇ ಆದ ಜಾಗ ವಿರಬೇಕು. ಅಲ್ಲದೆ, ಮನೆ ಕಟ್ಟುವಬಗ್ಗೆ ಮತ್ತು ಮೊದಲ ವೆಚ್ಚಕ್ಕಾಗಿ ನಿಮ್ಮ ಹತ್ತಿರ ಸ್ವಲ್ಪ ಮೂಲಧನವೂ ಇರಬೇಕು. ಆಮೇಲೆ, ಸ್ವೀಕೃತ ಯೋಜನೆಯ ಅಂತರ್ಗತವಾಗಿ ಸಾಕಷ್ಟು ಹಣವನ್ನು ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಒದಗಿಸುತ್ತದೆ.

ಜೀವ ವಿಮೆಗಿಂತ ಶ್ರೇಷ್ಠ ಭದ್ರತೆ ಬೇರೊಂದಿಲ್ಲ

ನಿಮ್ಮ ನೆಚ್ಚಿನ ಮೈಸೂರು ಗಂಧದ ಸಾಬೂನು ಈಗ ಹೊಸ ರೂಪದಲ್ಲಿ ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ ವ್ಯಾಕ್ಯುಮ್ ಸೋಪ್ ಪ್ಲಾಂಟ್

ಈ ಸಾಬೂನಿಗೆ ಮೊದಲಿನ ಗೋಲಾಕಾರದ ಬದಲು ಚೌಕಾಕಾರದ ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ ಅಳತೆ ಕುಗ್ಗಿಲ್ಲ ಮತ್ತು ಸುವಾಸನೆ ಬದಲಾಗಿಲ್ಲ.

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು.